# ವೈದ್ಯಕೀಯ ವಿದ್ಯಾರ್ಥಿಯ ಕ್ರೀಡಾ ಸಾಧನೆ

## ಈಜು ಸ್ಪರ್ಧೆಯಲ್ಲಿ 100ಕ್ಕೂ ಹೆಚ್ಚು ಪದಕ, ಪ್ರಶಸ್ತಿಗಳ ಗರಿ





ಮೈಸೂರು, ಅ.15(ಜಿಎ)– ಮೈಸೂರು ವೈದ್ಯಕೀಯ ವಿದ್ಯಾರ್ಥಿಯೊಬ್ಬರು ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ಈಜು ಸ್ಪರ್ಧೆಯಲ್ಲಿ 100ಕ್ಕೂ ಹೆಚ್ಚು ಪದಕ, ಪ್ರಶಸ್ತಿಗಳನ್ನು ಗಳಿಸುವ ಮೂಲಕ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.

ಮೈಸೂರಿನ ಜೆಸಿ ನಗರದ ಹೇಮಕುಮಾರ್ ಮತ್ತು ಸುಚಿತ್ರ ದಂಪತಿ ಪುತ್ರ ಓಂಕುಮಾರ್ (22) ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ 4ನೇ ವರ್ಷದ ವೈದ್ಯಕೀಯ ವಿದ್ಯಾರ್ಥಿ. ಇವರು ಈಜು ಸ್ಪರ್ಧೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ ಹಾಗೂ ದೇಶವನ್ನು ಪ್ರತಿನಿಧಿಸಿ, ಸಾಕಷ್ಟು ಪ್ರಶಸ್ತಿ ಗೆದ್ದಿದ್ದಾರೆ.

ಓಂಕುಮಾರ್, ಐದು ವರ್ಷದ ಬಾಲಕನಾಗಿದ್ದಾಗಿನಿಂದಲೇ ಈಜು ತರಬೇತಿ ಪಡೆದಿದ್ದು, ಈವರೆಗೂ ವರ್ಲ್ಡ್ ಚಾಂಪಿಯನ್ ಶಿಪ್, ಏಷಿಯನ್ ಗೇಮ್ಸ್, ಆಲ್ ಇಂಡಿಯಾ ಓಪನ್ ವಿಭಾಗ, ಅಕ್ವಾಥಾನ್ ಮತ್ತು ಟ್ರೈಕಾಥ್ಲಾನ್ ಸೇರಿದಂತೆ ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಸಾಧನೆ ಮೆರೆದಿದ್ದಾರೆ.

ವರ್ಲ್ಡ್ ಚಾಂಪಿಯನ್‌ಶಿಪ್‌ನಲ್ಲಿ 64ನೇ ರ್‍ಯಾಂಕ್, ಏಷಿಯನ್ ಗೇಮ್ಸ್‌ನಲ್ಲಿ 11ನೇ ರ್‍ಯಾಂಕ್ ಪಡೆದಿದ್ದಾರೆ. 2018ರಲ್ಲಿ ನಡೆದ ಆಲ್ ಇಂಡಿಯಾ ಓಪನ್ ಈಜು ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಚೆನ್ನೈನಲ್ಲಿ ನಡೆದ ಅಕ್ವಾಥಾನ್ ಓಪನ್ ವಾಟರ್ ಸ್ವಿಮ್ಮಿಂಗ್‌ನಲ್ಲಿ 1.5 ಕಿಮೀ ಮೀಟರ್ ಸ್ವಿಮ್ಮಿಂಗ್ ಜೊತೆಗೆ 5 ಕಿಮೀ ಓಟದಲ್ಲೂ 3ನೇ ಸ್ಥಾನ ಪಡೆದುಕೊಂಡಿದ್ದಾರೆ. ಕೇರಳದಲ್ಲಿ ನಡೆದ ಟ್ರಯಥ್ಲಾನ್ ಸ್ಪರ್ಧೆಯಲ್ಲಿ 1.5ಕಿಮೀ ಸ್ವಿಮ್ಮಿಂಗ್, 40 ಕಿಮೀ ಸೈಕ್ಲಿಂಗ್ ಹಾಗೂ 20 ಕಿಮೀ ಓಡಿ 14ನೇ ರ್‍ಯಾಂಕ್ ತಮ್ಮದಾಗಿಸಿಕೊಂಡಿದ್ದು, ಕಳೆದ ನಾಲ್ಕು ವರ್ಷದಿಂದ ನಡೆದ ಅಂತರ ವಿವಿಗಳ ಈಜು ಸ್ಪರ್ಧೆಯಲ್ಲಿ, 16 ವಿಭಾಗಗಳಲ್ಲಿ ಮೊದಲ ಸ್ಥಾನ ಗಿಟ್ಟಿಸಿಕೊಳ್ಳುವ ಮೂಲಕ ಸಾಧನೆ ಹಾದಿ ಮುಂದುವರೆಸಿದ್ದಾರೆ. ಪ್ರತಿನಿತ್ಯ ಬೆಳಗ್ಗೆ-ಸಂಜೆ ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಈಜುಕೊಳದಲ್ಲಿ ತಪ್ಪದೆ ತರಬೇತಿ ಪಡೆಯುತ್ತಾ ಬಂದಿದ್ದಾರೆ. ಓದಿಗಾಗಿ ಸಮಯವನ್ನು ಮೀಸಲಿಟ್ಟು ಒಂದು ಗಂಟೆ ಜಿಮ್ ಮಾಡಿ ತಮ್ಮ ಮುಂದಿನ ಸ್ಪರ್ಧೆಗೆ ನಿತ್ಯವೂ ಕಸರತ್ತು ನಡೆಸುತ್ತಿದ್ದಾರೆ.

**ಐರನ್ ಮ್ಯಾನ್ ಚಾಲೆಂಜ್:** ಗೋವಾದಲ್ಲಿ ಐರನ್ ಮ್ಯಾನ್ ಚಾಲೆಂಜ್ ಸ್ಪರ್ಧೆಯೂ ಮುಂದಿನ ವರ್ಷ ನವೆಂಬರ್‌ನಲ್ಲಿ ನಡೆಯಲಿದ್ದು, ಇದರಲ್ಲಿ 1.5ಕಿಮೀ ಸ್ವಿಮ್ಮಿಂಗ್, 90 ಕಿಮೀ ಸೈಕ್ಲಿಂಗ್ ಹಾಗೂ 21 ಕಿಮೀ ಓಡಬೇಕಿದೆ. ಇದರಲ್ಲಿ ವಿಜೇತರಾದವರಿಗೆ ಅಮೆರಿಕದಲ್ಲಿ ನಡೆಯುವ ವಿಶ್ವ ಮಟ್ಟದ ಕಷ್ಟಕರ ಐರನ್ ಮ್ಯಾನ್ ಚಾಲೆಂಜ್‌ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತದೆ. ಈ ಸ್ಪರ್ಧೆಯಲ್ಲಿ 3ಕಿಮೀ ಸ್ವಿಮ್ಮಿಂಗ್, 180 ಕಿಮೀ ಸೈಕ್ಲಿಂಗ್ ಮತ್ತು 42 ಕಿಮೀ ಓಡಬೇಕಿದೆ. ಸದ್ಯ ಓಂಕುಮಾರ್ ಮುಂದಿನ ತಿಂಗಳು ಗೋವಾದಲ್ಲಿ ನಡೆಯುವ ಆಫ್ ಐರನ್ ಮ್ಯಾನ್ ಸ್ಪರ್ಧೆಯಲ್ಲಿ ಸಾಧನೆ ಮೆರೆದು, ಅಮೆರಿಕಾದಲ್ಲಿ ಆಯೋಜಿಸುವ ಸ್ಪರ್ಧೆಯಲ್ಲಿ ಸ್ಪರ್ಧಿಸುವ ಕನಸು ಹೊಂದಿದ್ದಾರೆ.



ನನ್ನ ತಂದೆ-ತಾಯಿ, ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಗೂ ಪ್ರೋತ್ಸಾಹ ನೀಡುತ್ತಿದ್ದಾರೆ. ನನ್ನ ಪುಟ್ಟ ಸಾಧನೆಗೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ದ್ರಾಕ್ಷಾಯಿಣಿ ಮತ್ತು ಬೋಧಕರಾದ ಸಾರಿಕಾ, ಸ್ಟೂಡೆಂಟ್ ವೆಲ್ಫೇರ್‌ನ ಚಂದ್ರಶೇಖರ್ ಅವರಿಗೆ ಧನ್ಯವಾದ ತಿಳಿಸುತ್ತೇನೆ. ಈ ಕ್ಷೇತ್ರದಲ್ಲಿ ಏನಾದರೂ ಸಾಧನೆ ಮಾಡಬೇಕು ಎಂಬ ಬಯಕೆ ಇದೆ. ಎಲ್ಲಾ ಕ್ಷೇತ್ರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಆದರೆ, ಕ್ರೀಡಾ ಕ್ಷೇತ್ರದಲ್ಲಿ ಇಂತಹ ಪ್ರಗತಿ ಇಲ್ಲ. ಅದನ್ನು ಅಳವಡಿಸಬೇಕಿದೆ.

- ಓಂಕುಮಾರ್, ಈಜುಪಟು

ಓಂಕುಮಾರ್ ನಮ್ಮ ಸಂಸ್ಥೆ ಹಿರಿಮೆ ಹೆಚ್ಚಿಸಿದ್ದು, ಕ್ರೀಡೆ ಮತ್ತು ಶಿಕ್ಷಣವನ್ನು ಸಮತೋಲನದಲ್ಲಿ ಕಾಯ್ದುಕೊಂಡಿದ್ದಾನೆ. ಇಂತಹ ವಿದ್ಯಾರ್ಥಿಗಳು ಸಾಧನೆ ಮಾಡುವ ವಿಶ್ವಾಸವಿದೆ. ಕ್ರೀಡೆಯಲ್ಲಿ ಸೋಲು, ಗೆಲುವು ಎರಡನ್ನು ನೋಡುವುದರಿಂದ ಮಾನಸಿಕ ವ್ಯಕ್ತಿತ್ವವನ್ನು ವೃದ್ಧಿಸಿಕೊಂಡಿರುತ್ತಾರೆ. ಕ್ರೀಡೆಯೂ ಒಂದು ರೀತಿಯಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಮಾನವೀಯತೆಯನ್ನು ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ.

- ಡಾ.ಕೆ.ಆರ್. ದ್ರಾಕ್ಷಾಯಿಣಿ, ಡೀನ್ ಅಂಡ್ ಡೈರೆಕ್ಟರ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ